ದಿನಾಂಕ ::16-08-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ ಃ ಶ್ರೀ ಎಸ್ ಬಿಹೆಚ್ ವಕೀಲರಿಂದಃ**

ಮೃತ ಬಸವರಾಜ ನನ್ನ ಗಂಡ. ಅಪಗಾತವನು ನಾನು ನೋಡಿರುವುದಿಲ್ಲ. ದ್ವಿಚಕ್ರ ವಾಹನದ ಮೇಲೆ ನನ ಗಂಡ ನನ್ನ ಸಬಂದಿಕರಾದ ಬೀಮವ್ವ ಮತು ನನ್ನ ಮಗ ಸೇರಿ ಹೊರಟಿದ್ದರ್ು೯ರ. ಅವರು ನಮಂ ಊರಿನಿಂದ ಹನಮಪುರು ಕ್ಕೆ ಹೂರಟಿದ್ದರು. ನನ್ನ ಗಂಡ ಚಾಲನೆ ಮಾಡುತ್ತಿದ್ದ ದ್ವಿಚಕ್ರ ವಾಹನದ ನಂ. ಹೇಳಲಾಗುವುದಿಲ್ಲ. ದಸರಿ ದ್ವಿಚಕ್ರ ವಾಹನ ನನ್ನ ಗಂಡನ ಹೆಸರಿನಲಿ ಇತು ಅದನು ಖರೀದಿಸಿ 1 ವರ್ಷ ಆಗಿರಲಿಲ್ಲ. ನನ್ನ ಗಂಡ ಪ್ರಥಮವಾಗಿ ಸದರಿ ಮೋ. ಸೈ ಖೇರಿದಿಸಿದ್ದರು ಎಂದರೆ ಸಾಕ್ಷಿ ಮೊದಲು ಇದ್ದ ಮೋ. ಸೈ ಅನ್ನು ಮಾರಾಟ ಮಾಡಿ ಹೊಸದಾಗಿ ಬೇರೆ ಮೊ. ಸೈ ಖೇರಿದಿಸಿದಾಗಿ ನುಡಿಯುತ್ತಾರೆ. ಲಾರಿ ಮತು ಮೋ.ಸೆ. ಮದ್ಯ ಎದುರುಬದುರು ಡಿಕಿಯಾಗಿರುತ್ತದೆ ಎಂದರೆ ನಿಜ. ನನ್ನ ಗಂಡನಿಗೆ ದ್ವಿಚಕ್ರ ವಾಹನ ಚಾಲನ ಪರವಾನಿಗೆ ಇತ್ತು. ಸದರಿ ಚಾಲನೆ ಪರವಾನಿಗೆ ಪತ್ರ ಕಳೆದಿರುತ್ತದೆ. ನನ್ನ ಗಂಡ ಯಾವ ವಾಹನ ನಿರೀಕ್ಷಕರು ಆರ್ ಟಿ ಒ ಆಪೀಸನಿಂದ ವಾಹನ ಚಾಲನ ಪರವಾನಿಗೆ ಪತ್ರ ಪಡೆದಿದ್ದರು ಎಂದು ನನಗೆ ಗೊತ್ತಿಲ್ಲ. ನನ್ನು ಗಂಡನ ವಾಹನ ಚಾಲನ ಪರವಾನಿಗ ಪತ್ರ ಕೆಳದುಹೋಗಿರುವುದಾಗಿ ಸುಳು ಸಾಕ್ಷಿ ಹೇಳುತ್ತಿದೇನೆ ಎಂದರೆ ಸರಿಯಲ್ಲ. ನನ್ನ ಗಂಡನ ಚಾಲನ ಪರವಾನಿಗೆ ಪತ್ರ ಪಡೆಯಲು ನಾನು ಪ್ರಯತ್ನಿಸಿರುವುದಿಲ್ಲ. ನನ್ನ ಗಂಡನಿಗೆ ಚಾಲನ ಪರವಾನಿಗೆ ಪತ್ರ ಇತ್ತು ಎಂದು ಸುಳು ಸಾಕ್ಷಿ ಹೇಳತ್ತಿದೇನೆ ಎಂದರೆ ಸರಿಯಲ್ಲ. ನನ್ನ ಗಂಡನಿಗೆ ಚಾಲನ ಪರವಾನಿಗೆ ಪತ್ರ ಇರಲ್ಲಿಲ ಎಂದು ಪೂಲಿಸರು ಆತನ ವಿರುದ ದೊಷರೂಣ ಪತ್ರ ಪತ್ರ ಸಲಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಗಂಡ , ನನ್ನ ಮಗ ಹಾಗೂ ಬೀಮವ್ವ ಹೆಲ್ಮಟ್ ಧರಿಸಿರಲಿಲ್ಲ ಎಂದರೆ ಸರಿಯಲ್ಲ.

ನನ ಗಂಡ ಮದ್ಯಪಾನ ಮಾಡಿ ತಾನೆ ದ್ವಿಚಕ್ರ ವಾಹನವನ್ನು ಚಾಲನೆ ಮಾಡಿಕೊಂಡು ಎದುರುರಿಗೆ ಬರುತ್ತಿದ್ದ ಲಾರಿಗೆ ಡಿಕಿಪಡಿಸಿ ಅಪಗಾತ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅಪಗಾತವು ನನ ಗಂಡನ ತಪ್ಪಿನಿಂದ ಆಗಿದೆ ಎಂದರೆ ಸರಿಯಲ . ಸದರಿ ವಿಷಯ ನಮಗೆ ಗೊತ್ತಿದ್ದರು ಸಹ ಪರಿಹಾರ ಪಡೆಯುವ ಉದ್ದೆಶದಿಂದ ಲಾರಿಯ ಚಾಲಕನ ಮೇಲೆ ಸುಳು ಪ್ರಕರಣ ದಾಖಲಸಿ ಸುಳು ಸಾಕ್ಷಿ ಹೇಳತ್ತಿದೇನೆ ಎಂದರೆ ಸರಿಯಲ್ಲ. ನನಗೆ ವಿಮೆ ಕಂಪನಿಯವರು ನನ್ನ ಗಂಡನ ಸಾವಿನ ಕುರಿತು ಪರಿಹಾರ ಹಣ ನೀಡಿರುವುದಿಲ್ಲ. ನಾನು ವಿಮ

ಕಂಪನಿಗೆ ಪರಿಹಾರ ಹಣ ನೀಡುವಂತೆ ಅರ್ಜಿ ನೀಡಿದ್ದೆನು. ಆದರೆ ಅವರು ಪರಿಹಾರ ಹಣ ಕೊಟಿರುವುದಿಲ್ಲ. ನಾನು ನಮ್ಮ ದ್ವಿಚಕ್ರ ವಾಹನದ ವಿಮೆ ಕಂಪನಿಯಿಂದ ಪರಿಹಾರ ಹಣ ಪಡೆದುಕೊಂಡು ಪುನಃಹ ಈ ಪ್ರಕರಣ ದಾಖಲಿಸಿರುತ್ತೆನೆ ಎಂದರೆ ಸರಿಯಲ.

ನನ್ನ ಗಂಡ ಪ್ರತಿ ತಿಂಗಳು ರೂ 30 ಸಾವಿರ ಆದಾಯ ಪಡೆಯುತ್ತಿದ್ದ ಎಂದು ಸುಳು ಸಾಕ್ಷಿ ಹೇಳತ್ತಿದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

ಓ. ಹೇಳಿ ಸಹಿಪಡೆಯಲಾಗಿದೆ

3ನೇ ಹೆಚ್ಚುವರಿ ಹಿರಿಯ ಮತ್ತು ಸಿವಿಲ್ ನ್ಯಾಯಾಧೀಶರು,
ರಾಯಚೂರು.